



# ಡೇರೆ ಚೆಲುವಿನ ತಾರೆ

ನಾಗರಿಕರ ಸಮುದಾಯ ಪ್ರಜ್ಞೆಯಿಂದ ರೂಪುಗೊಂಡಿರುವ ಸ್ವೀಡನ್‌ನಲ್ಲಿನ ಡೇರೆ ಉದ್ಯಾನ ಪ್ರವಾಸಿಗರ ಆಕರ್ಷಣೆಯ ಕೇಂದ್ರವೂ ಹೌದು.

■ ಸರೋಜಾ ಪ್ರಕಾಶ



ಕಾಶಿ ಕಮಲ, ಬಂಗಾರದ ಕಡ್ಡಿ, ಬಿಳಿ ಗೊಂಡೆ, ಜಮ್ಖಾನ ಪಟ್ಟೆ ಇತ್ಯಾದಿ ವಿವಿಧ ವಿಚಿತ್ರ ಹೆಸರು ಹೊತ್ತ ವರ್ಣಮಯ ಡೇರೆಗಳು ಮಲೆನಾಡಿನ ಅಂಗಳಗಳಲ್ಲಿ ನಳನಳಿಸುತ್ತವೆ. ಹೆಚ್ಚಿನ ಪರಿಮಳ ಹೊಂದಿಲ್ಲದಿದ್ದರೂ ವಿಭಿನ್ನ ಬಣ್ಣ, ಗಾತ್ರ, ವಿನ್ಯಾಸ ಮತ್ತು ಆಕಾರದಿಂದಾಗಿಯೇ ಜನರ ಮನಸೆಳೆಯುತ್ತವೆ. ನಾವು ಶಾಲೆಗೆ ಹೋಗುವಾಗ ತಲೆಗಿಂತ ದೊಡ್ಡದಾದ ಡೇರೆ ಹೂ ಮುಡಿಯುವುದೆಂದರೆ ಖುಷಿಯೋ ಖುಷಿ. ಆಗ ಮಳೆಗಾಲದಲ್ಲಿ ನಮ್ಮಂಗಳದ ಮುಂದಿನ ಭಾಗದಲ್ಲಿ ಅಪ್ಪಯ್ಯನ ಹಾಗಲ, ಬೆಂಡೆ ನಳನಳಿಸಿದರೆ, ಹಿಂದಿನ ಅಂಗಳದಲ್ಲಿ ಆಯಿಯ ಡೇರೆಗಳ ಜಂಬೂಸವಾರಿ. ಎಲೆಗಳ ಆಕಾರ, ದಂಟಿನ ಬಣ್ಣ ನೋಡಿಯೇ ಆಯಿ ಅದು ಯಾವ ಬಣ್ಣದ ಡೇರೆ ಎಂದು ಪತ್ತೆಹಚ್ಚುತ್ತಿದ್ದಳು.

ಸ್ವೀಡನ್‌ನ ಸ್ಟಾಕ್ ಹೋಂ ನಗರಕ್ಕೆ ಹೋದಾಗ ರಸ್ತೆ ಬದಿಯಲ್ಲಿ ಅಲ್ಲಲ್ಲಿ ಇತರೆ ಹೂಗಳ ನಡುವೆ ಇಣುಕುತ್ತಿದ್ದ ಡೇರೆ ಕಂಡಾಗಲೆಲ್ಲ ಮಲೆನಾಡಿನ ನೆನಪುಗಳು ಮರುಕಳಿಸುತ್ತಿದ್ದವು. ‘ಸಮೀಪವೇ ಡೇಲಿಯಾ ಪಾರ್ಕ್ ಇದೆ, ನೋಡಿ ಬರ್ತೀರಾ?’ ಎಂದು ಮಗಳು ಕೇಳಿದಾಗ ನನಗೆ ರೆಕ್ಕೆ ಬಂದ ಸಂಭ್ರಮ.

ಡೇರೆ ಮೊದಲಿಗೆ ಮೆಕ್ಸಿಕೊದ ಕಾಡು ಹೂ ಆಗಿತ್ತಂತೆ. ಎಕೊಕ್ಟಿಲಿ ಅನ್ನುವುದು ಇದರ ಪೂರ್ವ ಸ್ಪಾನಿಶ್ ನಾಮ. ಸ್ವೀಡನ್ ದೇಶದ ಆಂಡರ್ಸ್ ಡೇಲ್ ಎಂಬ ಸಸ್ಯವಿಜ್ಞಾನಿಯ ಹೆಸರು ಬಳಸಿ ಡೇಲಿಯಾ ನಾಮಾಂಕಿತ ಆಯಿತೆನ್ನಲಾಗುತ್ತದೆ. 18ನೇ ಶತಮಾನದಲ್ಲಿ ನೈಸರ್ಗಿಕ ಬಣ್ಣ ಪಡೆಯಲು ಹುಳುವೊಂದರ ಶೋಧಕ್ಕೆಂದು ಬಂದ ಫ್ರೆಂಚ್ ತಜ್ಞನೊಬ್ಬ, ಇವುಗಳ ಸೌಂದರ್ಯಕ್ಕೆ ಮರುಳಾಗಿ ಒಂದೆರಡು ಗಡ್ಡೆಗಳನ್ನು ತನ್ನೂರಿಗೆ ಒಯ್ದ. ಅಲ್ಲಿಂದ ಅದು ಯೂರೋಪ್‌ನಲ್ಲಿ ಬೇಸಿಗೆಯಲ್ಲಿ ಅರಳುವ ಹೂವಾಗಿ ಖ್ಯಾತಿ ಪಡೆಯಿತು; ಇಂಗ್ಲೆಂಡಿನ ವಿಕ್ಟೋರಿಯಾ ರಾಣಿಯ ಕೈತೋಟವನ್ನೂ ಸೇರಿತು.

ಹೂ ಮಾತ್ರವಲ್ಲ; ಡೇರೆಯ ದಂಟು, ಮೊಗ್ಗು, ಎಲೆಗಳೂ ಜಗತ್ತಿನೆಲ್ಲೆಡೆ ಸೊಬಗು, ಘನತೆ, ಲಾವಣ್ಯಗಳ ಪ್ರತೀಕ. ಬ್ರಿಟಿಷರ ಮೂಲಕ ಭಾರತಕ್ಕೆ ಬಂದ ಡೇಲಿಯಾ ಕರ್ನಾಟಕದಲ್ಲಿ ಡೇರೆ ಎಂದಾಗಿ, ಇಲ್ಲಿಯದೇ ಹೂವೆನಿಸಿಬಿಟ್ಟಿದೆ. ಮೂಲದಲ್ಲಿ ನಲವತ್ತು ಜಾತಿಯ ಡೇರೆಗಳಷ್ಟೇ ಇವೆ. ಪ್ರಸ್ತುತ, ಇಪ್ಪತ್ತು ಸಾವಿರದಷ್ಟು ಡೇರೆಗಳನ್ನು ಕಸಿ ಇತ್ಯಾದಿ ಕ್ರಮಗಳಿಂದ ಸಂಗೋಪನೆ ಮಾಡಲಾಗುತ್ತಿದೆ.

ಎನ್ಸ್ಕೆಡೆ ಸ್ಟೇಷನ್‌ನಲ್ಲಿಳಿದು ಹಸಿರು ಹಾಸಿನ ಗುಡ್ಡದ ನಡುವಿನ ಕಾಲುಹಾದಿಯಲ್ಲಿ ನಡೆದೆವು. ಅಲ್ಲಲ್ಲಿ ಮನೆಗಳು, ಮಕ್ಕಳಿಗೆ ಜೋಕಾಲಿ, ಜಾರುಬಂಡಿ ಇರುವ ಪಾರ್ಕ್‌ಗಳು, ಮತ್ತೊಂದು ಶಾಲೆ. ಆ ಶಾಲೆಯ ಪಕ್ಕವೇ ಡೇರೆ ಪಾರ್ಕ್. ದೂರದಿಂದಲೇ ಓಕುಳಿಯ ಬಣ್ಣ ಕಣ್ಣು ಸೆಳೆಯಿತು. ಕಾಂಪೌಂಡ್ ಗೋಡೆಯೂ ಇಲ್ಲದ ಸ್ಥಳದಲ್ಲಿ ಸಿಮೆಂಟ್ ಕುಂಡಗಳಲ್ಲಿ ಡೇರೆ ಹೂಗಳು ತುಂಬಿದ್ದವು. ನಮ್ಮೂರಿನ ಕೆಲವು ಹೂಗಳನ್ನು ಕಂಡು ಕಣ್ಣರಳಿದವು. ಈ ಮೊದಲು ಕಂಡಿಲ್ಲದ ಡೇರೆಗಳೇ ಹೆಚ್ಚಾಗಿದ್ದವು. ಕೆಲವು ಪುಟ್ಟ ಚೆಂಡಿನಂತಿದ್ದ ಹೂಗಳು, ಕೆಲವು ಬೊಗಸೆಗಿಂತ ದೊಡ್ಡವು.

‘ವಾಲ್ಕೊಮೆನ್ (ಸ್ವಾಗತ). ಡೇಲಿಯಾ ಪಾರ್ಕೆನ್, ಸ್ವಲ್ಪ ಹೊತ್ತು ಕೂತು ಆನಂದಿಸಿ’ ಎಂಬ ಬೋರ್ಡ್ ಕೆಳಗೆ, ಡೇರೆ ಪಾರ್ಕ್ ಕುರಿತಾಗಿ ಟಿಪ್ಪಣಿಯಿತ್ತು. ಒಂದಿಷ್ಟು ಸ್ಥಳೀಯ ‘ಡೇಲಿಯಾ ಪ್ರಿಯರು’ ರೂಪಿಸಿದ ಉದ್ಯಾನವದು. ಹತ್ತು ವರ್ಷಗಳ ಹಿಂದೆ ಬೇಸಿಗೆಯಲ್ಲಿ ಆರಂಭಗೊಂಡ ಅಭಿಯಾನ ಪುಟ್ಟ ಉದ್ಯಾನದ ರೂಪ ಪಡೆದಿದೆ. ಚಳಿ ದೇಶ ಸ್ವೀಡನ್‌ನಲ್ಲಿ ಹಿಮ ಅಥವಾ ಮಂಜು ಬೀಳುವ ಕಾಲ ಮುಗಿದ ಹೊರತು ಡೇರೆ ಮೇಲೇಳುವುದಿಲ್ಲ. ಜೂನ್ ಮೊದಲ ವಾರ ಜನರು ತಮ್ಮ ಮನೆಗಳಲ್ಲಿಯೇ ಗಡ್ಡೆಗಳಿಗೆ ನೀರುಣಿಸಿ ಚಿಗುರುವಂತೆ ಮಾಡುತ್ತಾರೆ. ಗುಂಪಿನ 15–20 ಸದಸ್ಯರು ಕಳೆ ತೆಗೆದು ಕುಂಡಗಳಿಗೆ ಗೊಬ್ಬರ, ಮಣ್ಣು ತುಂಬಿಸುತ್ತಾರೆ. ಗಿಡ ಚಿಗುರುತ್ತಿದ್ದಂತೆ ಒಂದು ದಿನ ಹಬ್ಬದಂತೆ ಎಲ್ಲರೂ ತಮ್ಮ ತಮ್ಮ ಗಿಡ ತಂದು ನೆಡುತ್ತಾರೆ. ಮುಂದೆ ಬೇಸಿಗೆಯ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಡೇರೆ ಹೂಗಳು ಅರಳಿ ಜನರನ್ನು ಸೆಳೆಯುತ್ತವೆ.

‘ಹೆಚ್ಚು ಜನರು ಬನ್ನಿ, ಇಲ್ಲಿ ಕುಳಿತುಕೊಳ್ಳಿ. ನಿಮ್ಮ ನಾಯಿಗಳನ್ನು ಇಲ್ಲಿ ಓಡಾಡಿಸಿ. ಆಗ ಉದ್ದ ಬೆರಳು ತೂರಿಸಿ ಡೇರೆ ಕೊಯ್ಯುವವರ ಸಂಖ್ಯೆ ಕಡಿಮೆಯಾಗುತ್ತದೆ’ ಎನ್ನುವ ಬರಹ ಓದಿ ನಗು ಬಂತು. ನಮ್ಮಲ್ಲಷ್ಟೇ ಅಲ್ಲ, ಚೆಂದದ ಹೂಗಳಿಗೆ ಎಲ್ಲೆಡೆ ಕಳ್ಳರಿದ್ದಾರೆ!

ಪ್ರತಿಕ್ರಿಯಿಸಿ: feedback@sudha.co.in